2014–15ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ರಾಜ್ಯದಲ್ಲಿ ಅಂತರ್ಜಲ ಕುಸಿದಿರುವ ಜಿಲ್ಲೆಗಳಲ್ಲಿ, ವಿಶೇಷವಾಗಿ ಗದಗ, ಬಿಜಾಪೂರ, ಕೊಪ್ಪಳ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ನೈಸರ್ಗಿಕ ನದಿಕೊಳ್ಳಗಳಿಗೆ ಅಡ್ಡಲಾಗಿ ಸರಣಿಯಲ್ಲಿ ಪಿಕಪ್‌ಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು, ` 188.21 ಲಕ್ಷಗಳ ಅನುದಾನದಲ್ಲಿ ನಿರ್ಮಿಸಲು ಕ್ರಿಯಾ ಯೋಜನೆ ಪರಿಶೀಲನೆಯಲ್ಲಿದೆ.

ಇ) 2014–15ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಈ ಯೋಜನೆಯನ್ನು ಕೈಗೊಂಡಿರುವುದಿಲ್ಲ.

ಹುಲಿಕೆರೆ ಟನಲ್ ದುರಸ್ತಿ ಕಾಮಗಾರಿ

1053 (1732); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ಮಂಡ್ಯ ಜಿಲ್ಲೆಯ ಹುಲಿಕೆರೆ ಟನಲ್ ದುರಸ್ತಿ ಕಾಮಗಾರಿ ಯಾವ ಹಂತದಲ್ಲಿದೆ; ಈ ಟನಲ್ ಕುಸಿತದ ಪ್ರಮಾಣ ಎಷ್ಟು; ಯಾವಾಗ ದುರಸ್ಥಿ ಕಾಮಗಾರಿ ಕಾರ್ಯ ಆರಂಭಿಸಲಾಯಿತು; ಈ ದುರಸ್ಥಿ ಯಾವಾಗ ಮುಕ್ತಾಯಗೊಳ್ಳಲಿದೆ.

ಆ) ವಿರಿಜಾ ನಾಲೆ, ಚಿಕ್ಕದೇವರಾಯ ನಾಲೆ, ರಾಮಸ್ವಾಮಿ ನಾಲೆಗಳ ಆಧುನೀಕರಣ ಕಾಮಗಾರಿಗಳು ಯಾವ ಹಂತದಲ್ಲಿವೆ; ಈ ನಾಲೆಗಳ ಆಧುನೀಕರಣಕ್ಕೆ ಮೀಸಲಿಟ್ಟಿರುವ (ಮಂಜೂರು ಮಾಡಿ ಬಿಡುಗಡೆ ಮಾಡಿರುವ) ಹಣ ಎಷ್ಟು; ಈ ಕಾಮಗಾರಿಗಳು ಯಾವಾಗ ಮುಕ್ತಾಯಗೊಳ್ಳಲಿವೆ.

ಶ್ರೀ ಎಂ. ಬಿ. ಪಾಟೀಲ್ (ಮಾನ್ಯ ಜಲಸಂಪನ್ಮೂಲ ಸಚಿವರು)

ಅ) ಮಂಡ್ಯ ಜಿಲ್ಲೆಯ ಕೃಷ್ಣರಾಜಸಾಗರ ಜಲಾಶಯದ ಎಡಭಾಗದಿಂದ ಪ್ರಾರಂಭವಾಗುವ ವಿಶ್ವೇಶ್ವರಯ್ಯ ನಾಲಾ ಸರಪಳಿ 40.70 ಕಿಮೀ. 43.50 ಕಿಮೀ ವರೆಗೆ 2800 ಮೀ ಉದ್ದದ ಹುಲಿಕೆರೆ ಟನಲ್ ಅನ್ನು 1931ರಲ್ಲಿ ನಿರ್ಮಿಸಿದ್ದು, 4 Vertical Shaft ಹಾಗೂ 2 Inclined Shaft

ಇರುತ್ತದೆ. ಸುರಂಗದ ಸರಪಳಿ 0.00 ಇಂದ 1888 ಮೀ. ವರೆಗೆ ಸೈಡ್ ವಾಲ್ ಹಾಗೂ 1888 ಮೀ. ನಂದ 2800 ಮೀ.ವರೆಗೆ ಸೈಡ್ ವಾಲ್ ಜೊತೆಗೆ ಕಮಾನನ್ನೂ ಕೂಡ ಕಲ್ಲು ಮತ್ತು ಸಿಮೆಂಟ್ ಗಾರೆಯಿಂದ ನಿರ್ಮಿಸಲಾಗಿರುತ್ತದೆ.

ದಿನಾಂಕ: 15.03.2012ರಂದು ಸುರಂಗದ ಸರಪಳಿ 2060 ಮೀ. ನ. ಸಮೀಪದಲ್ಲಿ ಇರುವ 2ನೇ Shaft ಪಕ್ಕದಲ್ಲಿ ಸುಮಾರು 15 ಮೀ. ನಷ್ಟು ಕುಸಿತ ಉಂಟಾಗಿರುತ್ತದೆ.

ಹುಲಿಕೆರೆ ಟನಲ್ ದುರಸ್ತಿ ಕಾಮಗಾರಿಗೆ ದಿನಾಂಕ: 05.06.2014ರಲ್ಲಿ ಕಾರ್ಯಾದೇಶ ನೀಡಲಾಗಿದ್ದು, ಕಾಮಗಾರಿಯನ್ನು ದಿನಾಂಕ: 06.06.2014ರಂದು ಪ್ರಾರಂಭಿಸಲಾಗಿದೆ.

ಈ ಕಾಮಗಾರಿಯ ಗುತ್ತಿಗೆ ಅವಧಿಯು 3 ತಿಂಗಳಿದ್ದು, ದಿನಾಂಕ: 06.06.2014ರಂದು ನಡೆದ ನೀರಾವರಿ ಸಲಹಾ ಸಮಿತಿಯ ಸಭೆಯಲ್ಲಿನ ನಿರ್ದೇಶನದಂತೆ ಜುಲೈ 2014ರ ಅಂತ್ಯಕ್ಕೆ ಈ ದುರಸ್ತಿ ಕಾಮಗಾರಿಯನ್ನು ಪೂರ್ಣಗೊಳಿಸಲು ತ್ವರಿತಗತಿಯಲ್ಲಿ ಕ್ರಮಕೈಗೊಂಡಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಕ್ರ. ಸಂ.	ಅಣೆಕಟ್ಟೆ/ನಾಲೆಯ ಹೆಸರು	ಅಂದಾಜು ಮೊತ್ತ	2014-15ನೇ ಸಾಲಿನ ಅನುದಾನ	ಪ್ರಸ್ತುತ ಹಂತ
1	ವಿರಿಜಾ ನಾಲೆ	83.00	20.00	ಟೆಂಡರ್ ಪ್ರಕ್ರಿಯೆಯಲ್ಲಿದ್ದು, ಇಷ್ಟರ ಆರ್ಥಿಕ ಬಿಡ್ ಪ್ರಸ್ತಾವನೆಯನ್ನು ಕಾವೇರಿ ನೀರ್ವಾವರಿ ನಿಗಮದ ಮಂಡಳಿಯ ಮುಂದೆ ಮಂಡಿಸಲು

				ನಿಗಮದಲ್ಲಿ ಕ್ರಮವಹಿಸಲಾಗುತ್ತಿದೆ. ಈ ಸಾಲಿನಲ್ಲಿ ಈ ಕಾಮಗಾರಿಯನ್ನು ಕೈಗೊಳ್ಳಲಾಗುವುದು.
2	ಚಿಕ್ಕದೇವರಾಯ ನಾಲೆ	240.00	94.70	ಆಧುನೀಕರಣ ಕಾಮಗಾರಿಯ ಡಿ.ಪಿ.ಆರ್.ಗೆ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಕಾವೇರಿ ನೀರಾವರಿ ನಿಗಮದಿಂದ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.
3	ರಾಮಸ್ವಾಮಿ ನಾಲೆ	80.00	16.00	ಟೆಂಡರ್ ಪ್ರಕ್ರಿಯೆಯಲ್ಲಿದ್ದು, ಆರ್ಥಿಕ ಬಿಡ್ ಅನ್ನು ದಿನಾಂಕ: 28.06.2014ರಂದು ತೆರೆದಿದ್ದು, ಆರ್ಥಿಕ ಬಿಡ್ ಪ್ರಸ್ತಾವನೆಯನ್ನು ಟೆಂಡರ್ ಪರಿಶೀಲನಾ ಸಮಿತಿಯ ತೆರವಿಗಾಗಿ ಹಾಗೂ ಕಾವೇರಿ ನೀರಾವರಿ ನಿಗಮದ ಮಂಡಳಿಯ ಮುಂದೆ ಮಂಡಿಸಲು

				ನಿಗಮದಲ್ಲಿ ಕ್ರಮವಹಿಸಲಾಗುತ್ತಿದೆ. ಈ ಸಾಲಿನಲ್ಲಿ ಈ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಜಿಂಕೆಗಳ ಹಾವಳಿಯಿಂದ ಬೆಳೆಗಳು ನಾಶವಾಗುತ್ತಿರುವುದು

1054 (1900); ಶ್ರೀ ದೊಡ್ಡಪುನಿ ರಾಮಕೃಷ್ಣ ಸಿದ್ದಲಿಂಗಪ್ಪ (ಶಿರಹಟ್ಟಿ)

ಅ) ಶಿರಹಟ್ಟಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಜಿಂಕೆಗಳ ಹಾವಳಿಯಿಂದ ರೈತರು ಬೆಳೆಯುವ ಬೆಳೆಗಳನ್ನು ಹಾಳು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದರ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು; ರೈತರಿಗೆ ಸರ್ಕಾರವು ಯಾವ ಪರಿಹಾರವನ್ನು ನೀಡುತ್ತಿದೆ; ಈ ಬಗ್ಗೆ ಸರ್ಕಾರ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳುತ್ತದೆಯೇ?

ಶ್ರೀ ಬಿ. ರಮಾನಾಥ ರೈ (ಪೌನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹೌದು.

ಆ) ಸರ್ಕಾರದಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1. ಇಲಾಖೆ ಮತ್ತು ಗ್ರಾಮಸ್ಥರ ಸಹಾಯದೊಂದಿಗೆ ಪ್ರತಿ ರೈತನಿಗೆ ಅಥವಾ ರೈತರ ಗುಂಪಿಗೆ ಸಹಾಯಧನ ರೂಪದಲ್ಲಿ ಅಂದರೆ 50:50 ಅನುಪಾತದಲ್ಲಿ ಸೋಲಾರ್ ತಂತಿಬೇಲಿ ನಿರ್ಮಾಣ ಕುರಿತ ಪ್ರಸ್ತಾವನೆಯು ಸರ್ಕಾರದ ಪರಿಶೀಲನಾ ಹಂತದಲ್ಲಿದೆ.

2. ವನ್ಯ ಪ್ರಾಣಿಗಳಿಗೆ ಕುಡಿಯಲು ನೀರಿನ ಬಾವಿ ನಿರ್ಮಾಣ; ವನ್ಯ ಪ್ರಾಣಿಗಳು ಕಾಡು ಬಿಟ್ಟು ಹೊರಗೆ ಹೋಗದಂತೆ ಕಾಡಿನಲ್ಲಿ